**ದಿನಾಂಕಃ 27-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಸಿ.ಆರ್.ಎಸ್. ವಕೀಲರಿಂದಃ**

10. ಇಸ್ಮಾಯಿಲಸಾಬ ಇವರು VPC No.678 ರ ಮಾಲೀಕರಾಗಿದ್ದು, ಸದರಿಯವರು ನನ್ನ ಪರವಾಗಿ ಹಕ್ಕು ಬಿಟ್ಟ ಪತ್ರ, ಖರೀದಿ ಪತ್ರ, ದಾನ ಪತ್ರಗಳನ್ನು ಮಾಡಿಕೊಟ್ಟಿರುವುದಿಲ್ಲ, ಸಾಕ್ಷಿ ಮುಂದುವರೆದು ನಾನು ಬರುವವರೆಗೂ ಆಸ್ತಿಯನ್ನು ನೋಡಿಕೊಳ್ಳಿ ಎಂದು ನನಗೆ ಕೊಟ್ಟುಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಸದರಿಯವರು ನನಗೆ ಯಾವುದೇ ಕಾಗದ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ. ನನ್ನ ಚಿಕ್ಕಪ್ಪನಿಗೆ ನಮ್ಮ ತಂದೆಯು ಆಸ್ತಿ ಬಿಟ್ಟುಕೊಟ್ಟಿದ್ದು ಆ ಕಾರಣ ನಾನು ಆಸ್ತಿಯ ಮಾಲೀಕನು ಎಂದು ನುಡಿಯುತ್ತಾರೆ. ನಮ್ಮ ತಂದೆ ಮತ್ತು ನನ್ನ ಚಿಕ್ಕಪ್ಪನ ನಡುವೆ ವಿಭಾಗ ಆಗಿರುತ್ತದೆ ಎಂದರೆ ಸರಿ. ನನ್ನ ತಂದೆಗೆ ಒಂದು ಮನೆ ಮತ್ತು ನನ್ನ ಚಿಕ್ಕಪ್ಪನಿಗೆ ಒಂದು ಬಂದಿರುತ್ತದೆ ಎಂದರೆ ಸರಿ. ನನ್ನ ತಂದೆ ಪಾಲಿಗೆ ಬಂದ ಆಸ್ತಿ ಮೇಲೆ ನಾನು ಮತ್ತು ನನ್ನ ಸಹೋದರರು ಹಕ್ಕುದಾರರು ಆಗುತ್ತೇವೆ ಎಂದರೆ ಸರಿ. ನನ್ನ ಚಿಕ್ಕಪ್ಪನ ಆಸ್ತಿಗೆ ನನ್ನ ಚಿಕ್ಕಪ್ಪನ ಹೆಂಡತಿ ಮತ್ತು ಮಕ್ಕಳು ಮತ್ತು ಆತನ ವಾರಸುದಾರರು ಇಲ್ಲದಿದ್ದರೆ ಆತನು ಯಾರಿಗೆ ಆಸ್ತಿ ಮಾಡುತ್ತಾನೋ ಅವರ ಹಕ್ಕುದಾರರು ಆಗುತ್ತಾರೆ ಎಂದರೆ ಸರಿ.

11. 2 ನೇ ಪ್ರತಿವಾದಿಗೆ ಆಸ್ತಿ ಬಂದಿದ್ದರಿಂದ 2 ನೇ ಪ್ರತಿವಾದಿಯು ಆಸ್ತಿಗೆ ಮಾಲೀಕನು ಆಗಿರುತ್ತಾನೆ ಎಂದರೆ ಸರಿಯಲ್ಲ. ಸನ್ 2020-21 ರಲ್ಲಿ 1 ಮತ್ತು 2 ನೇ ಪ್ರತಿವಾದಿಯರು ಮನೆಯನ್ನು ಕಟ್ಟಲು ಪ್ರಾರಂಭಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ಪ್ರತಿವಾದಿಯು ಮನೆ ಕಟ್ಟುತ್ತಿದ್ದಾನೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಸಾಕ್ಷಿಯು ತಪ್ಪಾಗಿ ನಮೂದಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ವಾದ ಪತ್ರದಲ್ಲಿ ಪ್ರತಿವಾದಿಯು ಮನೆ ಕಟ್ಟುತ್ತಿದ್ದಾನೆ ಎಂದು ಪೊಲೀಸ್ ಠಾಣೆಗೆ ದೂರು ಸಲ್ಲಿಸಿರುತ್ತೇನೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. PDO ರವರಿಗೆ ಅರ್ಜಿ ಸಲ್ಲಿಸಿದ್ದು, ಪೊಲೀಸರು ಸ್ಥಳಕ್ಕೆ ಬಂದು ಕಟ್ಟಡವನ್ನು ಕಟ್ಟುವುದು ನಿಲ್ಲಿಸಿರುತ್ತಾರೆ ಎಂದು ನಮೂದಸಿರುತ್ತೇನೆ ಎಂದರೆ ಸಾಕ್ಷಿಯು ನಮೂದಿಸಿರುವುದು ತಪ್ಪಾಗಿರುತ್ತದೆ ಎಂದು ಮತ್ತು ನಾನು ಆ ರೀತಿ ತಿಳಿಸಿರುವುದಿಲ್ಲ ಎಂದು ನುಡಿಯುತ್ತಾರೆ.

13. O.S.No. 419/2016 ದಾವೆ ಸಲ್ಲಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ವಾದ ಪತ್ರ ಬರೆಯಲು ನಾನೆ ಮಾಹಿತಿ ನೀಡಿರುತ್ತೇನೆ. VPC No.678 ರಲ್ಲಿ ಪ್ರತಿವಾದಿಯರು ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಇಸ್ಮಾಯಿಲ ದಾನ ಪತ್ರ ಮಾಡಿಕೊಟ್ಟಾಗಿನಿಂದ ಇವತ್ತಿನವರೆಗೂ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಸ್ವಾಧಿನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸನ್ 2002 ರಲ್ಲಿ ಪ್ರತಿವಾದಿಯು ಹಳೆ ಮನೆಯನ್ನು ಬಿಳಿಸಿ ಹೊಸ ಮನೆಯನ್ನು ಕಟ್ಟುತ್ತಿರುವಾಗ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

14. PDO ರವರು ಸ್ಥಾನಿಕ ಚೌಕಾಸಿ ಮಾಡಿ ನನ್ನ ಆಸ್ತಿ ಬೇರೆ ಪ್ರತಿವಾದಿಯ ಆಸ್ತಿ ಬೇರೆ ಎಂದು ಮಾಹಿತಿ ತಿಳಿಸಿದ ಮೇರೆಗೆ ಪ್ರತಿವಾದಿಯು ಕಟ್ಟಡ ಕಟ್ಟಲು ಪ್ರಾರಂಭಿಸಿರುತ್ತಾನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಯಲ್ಲಿ 15-20 ಲಕ್ಷ ರೂಪಾಯಿ ಖರ್ಚು ಮಾಡಿ ವಾಸಿಸುತ್ತಿದ್ದಾನೆ ಎಂದರೆ ಸರಿಯಲ್ಲ. ನಾನು ಆಸ್ತಿಯ ಮಾಲೀಕನು ಆಗಿಲ್ಲ ಕಾರಣ ದಾವೆ ಸಲ್ಲಿಸಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**